**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ, ಕೇಂದ್ರೀಕೃತ ದಾಖಲಾತಿ ಘಟಕ,**
**ಆಯುಕ್ತರ ಕಛೇರಿ, ಕೆ.ಜಿ.ರಸ್ತೆ ಬೆಂಗಳೂರು-09**

ಸಂಖ್ಯೆ:ಸಿ.ಎ.ಸಿ.ರಿಟ್.ಅಪೀಲು.ಸಂಖ್ಯೆ:200483/2018 ದಿನಾಂಕ:3/11/2018

**ಜ್ಞಾಪನ**

ವಿಷಯ: ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಕಲ್ಬುರ್ಗಿ ಪೀಠದ ಅಪೀಲು ಆದೇಶ ಸಂಖ್ಯೆ:200483/2018 ರ ದಿನಾಂಕ:12-07-2018 ರ ಆದೇಶವನ್ನು ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ: ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಕಲ್ಬುರ್ಗಿ ಪೀಠದ ಅಪೀಲು ಆದೇಶ ಸಂಖ್ಯೆ:200483/2018 ದಿನಾಂಕ:12-07-2018

*******

ಶ್ರೀ.ಮಹೇಶ್ ತಂದೆ ಮಲ್ಲರಾವ್ V/S ರಾಜ್ಯ ಸರ್ಕಾರ ಮತ್ತು ಇತರರು ಪ್ರಕರಣದಲ್ಲಿ 2015 ನೇ ಸಾಲಿನ ಟಿ.ಇ.ಟಿ ಪರೀಕ್ಷೆಗೆ ಸಂಬಂದಿಸಿದಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಕಲ್ಬುರ್ಗಿ ಪೀಠದ ಅಪೀಲು ಆದೇಶ ಸಂಖ್ಯೆ:200483/2018 ರ ದಿನಾಂಕ:12-07-2018 ರ ಆದೇಶದಲ್ಲಿ ಮಾನ್ಯ ನ್ಯಾಯಾಲಯವು ನೀಡಿರುವ ತೀರ್ಪಿನ ಉದ್ಧೃತ ಭಾಗದಲ್ಲಿ ಈ ಕೆಳಕಂಡಂತೆ ಆದೇಶಿಸಿದೆ.

" For the aforesaid reasons, the appeal is partly allowed. The impugned order is modified by directing the respondent to accord the same benefit to all similarly placed candidates who have similarly ticked option No.2 to question No.132 of the said examination. That the grant of one mark shall be made within a period of four months from the date of receipt of the copy of this order. It is also specifically clarified that the grant of one mark to the writ petitioner and others cannot permit them to take the benefit of the said mark for action and acts as have already taken place up to that date. The additional mark that is going to be awarded will stand effective from the day it is awarded by the concerned candidates."

ಮೇಲ್ಕಂಡ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದಂತೆ ಪರಿಶೀಲಿಸಲಾಗಿ 2015 ನೇ ಸಾಲಿನ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ (ಟಿ.ಇ.ಟಿ-2015) ಪತ್ರಿಕೆ-1 ರ ಪ್ರಶ್ನೆಸಂಖ್ಯೆ-132 ಕ್ಕೆ ಒಟ್ಟು 1781 ಜನ ವಿದ್ಯಾರ್ಥಿಗಳು 04 ಆಯ್ಕೆಗಳ ಪೈಕಿ ಆಯ್ಕೆ 02 ಸರಿಯಾದ ಉತ್ತರವೆಂದು ಓ.ಎಂ.ಆರ್ ಉತ್ತರ ಪತ್ರಿಕೆಯಲ್ಲಿ ನಮೂದಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಮೇಲ್ಕಂಡ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪಿನಂತೆ 2015

ನೇ ಸಾಲಿನ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ (ಟಿ.ಇ.ಟಿ–2015) ಪತ್ರಿಕೆ–1 ರ ಪ್ರಶ್ನೆಸಂಖ್ಯೆ–132 ಕ್ಕೆ ಆಯ್ಕೆ–02 ಎಂದು ನಮೂದಿಸಿರುವ ಒಟ್ಟು 1781 ಜನ ವಿಧ್ಯಾರ್ಥಿಗಳಿಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಒಂದು 1 ಅಂಕವನ್ನು ನಮೂದಿಸಲಾಗಿದೆ. ಅಂಕಪಟ್ಟಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ತಂತ್ರಾಂಶದ ಮೂಲಕ ಅಪ್‌ಲೋಡ್ ಮಾಡಲಾಗುವುದು. ಸಂಬಂದಿಸಿದ ಅಭ್ಯರ್ಥಿಗಳು ಅದನ್ನು ಆನ್‌ಲೈನ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

<u>**ಷರತ್ತುಗಳು:–**</u>

1. ಮಾನ್ಯ ಉಚ್ಛ ನ್ಯಾಯಾಲಯದ ಆದೇಶದಂತೆ ಒಂದು ಅಂಕ ಗಳಿಸಿದ ನಂತರ ಟಿ.ಇ.ಟಿ ಪರೀಕ್ಷೆಯಲ್ಲಿ ಅರ್ಹರಾದವರ (ಹಿಂದಿನ 89 ಅಂಕಗಳಿಂದ ಪ್ರಸ್ತುತ 90 ಅಂಕ ಗಳಿಸಿರುವವರ) ಅರ್ಹತಾ ಪ್ರಮಾಣಪತ್ರವು ಈ ಆದೇಶ ಹೊರಡಿಸಿದ ದಿನಾಂಕದಿಂದ ಗರಿಷ್ಠ 07 ವರ್ಷಗಳ ಅವಧಿಗೆ ಮಾನ್ಯವಾಗಿರುತ್ತದೆ.
2. ಶಿಕ್ಷಕರ ಅರ್ಹತಾ ಪ್ರಮಾಣಪತ್ರವು ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗೆ ಮಾತ್ರ ಅನ್ವಯಿಸುತ್ತದೆ.
3. ಹಾಲಿ ಪಡೆದಿರುವ ಅಂಕಗಳಿಗಿಂತ ಮುಂದಿನ ಅರ್ಹತಾ ಪರೀಕ್ಷೆಯಲ್ಲಿನ ಅಂಕಗಳು ಹೆಚ್ಚಾದಲ್ಲಿ ಹಿಂದಿನ ಪ್ರಮಾಣ ಪತ್ರವು ತಾನೇ ತಾನಾಗಿ ರದ್ದಾಗುತ್ತದೆ.
4. ಪ್ರಮಾಣಪತ್ರವನ್ನು ವರ್ಗಾವಣೆ ಮಾಡುವಂತಿಲ್ಲ. ಮಾಡಿದಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

<u>**ಪ್ರತಿಯನ್ನು:–**</u>

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಬಹುಮಹಡಿಗಳ ಕಟ್ಟಡ, ಡಾ:ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು ರವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ,
2. ಮಾನ್ಯ ಸರ್ಕಾರಿ ವಕೀಲರು, ಕರ್ನಾಟಕ ಉಚ್ಛ ನ್ಯಾಯಾಲಯ ಕಲ್ಬುರ್ಗಿ ಪೀಠ, ಕಲ್ಬುರ್ಗಿ ರವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ,
3. ಹಿರಿಯ ಸಹಾಯಕ ನಿರ್ದೇಶಕರು, ಇ–ಆಡಳಿತ ವಿಭಾಗ, ಸಾ.ಶಿ.ಇ ಆಯುಕ್ತರ ಕಛೇರಿ, ನೃಪತುಂಗರಸ್ತೆ ಬೆಂಗಳೂರು–01 ಇವರಿಗೆ ಕಳುಹಿಸುತ್ತಾ, ಸದರಿ ಆದೇಶವನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
4. ಕಛೇರಿ ಪ್ರತಿ.